ದಿನಾಂಕಃ 25.10.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಸಿ.ಸಿ. ವಕೀಲರಿಂದಃ**

ಗುರುತು ಪರಿಚಯ ಇಲ್ಲದವರೊಂದಿಗೆ ನಾನು ಹಣಕಾಸಿನ ವ್ಯವಹಾರ ಮಾಡುವುದಿಲ್ಲ. ಆರೋಪಿಯ ವಿಳಾಸವನ್ನು ಮೂಡಿಗೆರೆ ತಾಲ್ಲೂಕಿನ ಕೃಷ್ಣಾಪುರ, ಶಾಂತಿನಗರ ಎಂದು ಪಿರ್ಯಾದಿನಲ್ಲಿ ನಮೂದಿಸಲಾಗಿದೆ. ಈ ವಿಳಾಸ ಆರೋಪಿಯದ್ದಾಗಿದ್ದರೇ ನಾನು ನನ್ನ ವಕೀಲರ ಮೂಲಕ ಕಳುಹಿಸಿದ ನೋಟಿಸು ಅವರಿಗೆ ತಲುಪಬೇಕಾಗಿತ್ತು ಎಂದರೆ ಸರಿ. ನಾನು ಕಳುಹಿಸಿದ ನೋಟಿಸು ಆರೋಪಿಗೆ ತಲುಪಿಲ್ಲ ಎಂದರೆ ಸರಿ. ನನಗೆ ತಿಂಗಳಿಗೆ 65 ಸಾವಿರ ಸಂಬಳ ಇದೆ. ಈ ಸಂಬಂದ ದಾಖಲೆಯನ್ನು ಹಾಜರುಪಡಿಸಿಲ್ಲ. ಈಗ ನೋಡುತ್ತಿರುವ ದಾಖಲೆ ಆರೋಪಿಗೆ ಸಂಬಂದಪಟ್ಟ ಆದಾರ್ ಕಾರ್ಡು ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. 2022-23 ನೇ ಸಾಲಿನ ನನ್ನ ಐ.ಟಿ.ಆರ್. ಸ್ವೀಕೃತಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಕಿತ್ತಳೆಗಂಡಿಯ ಶಾಂತ ನನಗೆ ಪರಿಚಯ ಇದ್ದಾರೆ ಎಂದರೆ ಸರಿ.

ಆರೋಪಿ ಯಾವ ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಅವರು ಲಾರಿ ಓಡಿಸುತ್ತಾರೆ. ಈ ವಿಚಾರ ನನಗೆ 2022 ರಿಂದ ಗೊತ್ತಿದೆ. ಸದರಿ ವಿಷಯವನ್ನು ಪಿರ್ಯಾದು ಮತ್ತು ನೋಟಿಸಿನಲ್ಲಿ ಬರೆಸಿಲ್ಲ. ನಿಪಿ-1(ಎ) ಸಹಿಯ ಬಗ್ಗೆ ತಜ್ಞರ ವರದಿ ಪಡೆಯಲು ನನಗೆ ತಕರಾರು ಇಲ್ಲ. ನಿಪಿ-1 ರಲ್ಲಿನ ಬರವಣಿಗೆಗಳನ್ನು ನನ್ನ ಸಮಕ್ಷಮ ಬರೆದಿದ್ದಾರೆ. ನಿಪಿ-1 ರಲ್ಲಿ ಆರೋಪಿಯು ಎರಡು ಸಹಿಗಳನ್ನು ಮಾಡಿದ್ದಾರೆ. ನನ್ನ ಗಂಡನ ಹೆಸರು ಕೆ.ವೆಂಕಟೇಶ್. ನಿಪಿ-1 (ಎ) ಸಹಿಗೂ ಸದರಿ ಚೆಕ್ಕಿನ ಹಿಂಬದಿಯಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಆ ಎರಡು ಸಹಿಗಳ ಇಂಕಿನಲ್ಲಿ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿ-1 ಬರವಣಿಗೆ ಹಾಗೂ ಸಹಿಗಳನ್ನು ನನ್ನ ಸಮಕ್ಷಮ ಬರೆದಿದ್ದರೇ ಎಲ್ಲಾ ಬರವಣಿಗೆಗಳು ಒಂದೇ ಇಂಕಿನಲ್ಲಿ ಇರಬೇಕಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಸಹಿಯನ್ನು ನನ್ನ ಪೆನ್ನಿನಲ್ಲಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಜನವರಿ 2022 ರಿಂದ ಡಿಸೆಂಬರ್ 2023 ರವರೆಗಿನ ನನ್ನ ಬ್ಯಾಂಕ್ ಸ್ಟೇಟ್‌ಮೆಂಟುಗಳನ್ನು ಅಗತ್ಯ ಇದ್ದರೇ ಹಾಜರುಪಡಿಸುತ್ತೇನೆ. 2022 ರ ಅಕ್ಟೋಬರ್ ನಲ್ಲಿ ದಸರಾ ರಜೆ ಇತ್ತು. ನನ್ನ ಪತಿಯು ಸಹ ಸರ್ಕಾರಿ ನೌಕರರು ಎಂದರೆ ಸರಿ. ಅವರು ಸಂಜೆ 5 ಗಂಟೆಗೆ ಕೆಲಸದಿಂದ ವಾಪಾಸು ಬರುತ್ತಾರೆ. ನಾನು ಸಹ ಬೆಳಿಗ್ಗೆ 9 ಗಂಟೆಗೆ ಮನೆಯಿಂದ ಹೊರಟರೇ ಸಂಜೆ 5 ಗಂಟೆಗೆ ಕೆಲಸದಿಂದ ವಾಪಾಸ್ಸು ಬರುತ್ತೇನೆ.

2022 ರ ನವೆಂಬರ್ ನಲ್ಲಿ ಎಷ್ಟು ದಿನಗಳ ಕಾಲ ನಾನು ಕೆಲಸ ಮಾಡಿದ್ದೇನೆ ಎಂದು ದಾಖಲೆಗಳನ್ನು ಹಾಜರುಪಡಿಸಬಲ್ಲೇ. ನಾನು ಕೆಲಸ ಮಾಡುತ್ತಿರುವ ಶಾಲೆ ಕಿತ್ತಲೆಗಂಡಿಯಲ್ಲಿ ಇದೆ. ಕಿತ್ತಲೆಗಂಡಿಯಿಂದ

ಹಳೇ ಮೂಡಿಗೆರೆಗೆ 4 ಕಿ.ಮೀ ಇದೆ. ಆರೋಪಿಯನ್ನು ಹೊರತುಪಡಿಸಿ ನಾನು ಬೇರೆ ಯಾರಿಗೂ ಹಣ ಕೊಟ್ಟಿಲ್ಲ. ಶಾಂತರವರ ಮಗ ಆದರ್ಶ ಎನ್ನುವವರ ಪರಿಚಯ ನನಗೆ ಇದೆ. ನಾನು ಶಾಂತರವರ ಮನೆಗೆ ಹೋಗಿ ಬರುತ್ತೇನೆ ಎಂದರೆ ಸರಿ. ಆರೋಪಿಯ ಬಳಿ ಒಂದು ಬೈಕ್ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ಶಾಂತರವರ ನಡುವಿನ ಹಣದ ವ್ಯವಹಾರದ ಬಾಬ್ತು ಅವರು ಆರೋಪಿಯಿಂದ ಎರಡು ಚೆಕ್ ಮತ್ತು ಒಂದು ಬೈಕನ್ನು ಪಡೆದಿದ್ದರೂ ಎಂದರೆ ಸಾಕ್ಷಿಯು ಅದು ನನಗೆ ಸಂಬಂದಪಡದ ವಿಚಾರ ಎಂದು ನುಡಿಯುತ್ತಾರೆ. ನಿಪಿ-1 ರ ಚೆಕ್ಕಿನ ಹಿಂಬದಿಯಲ್ಲಿ ಮಾತ್ರ ಸಹಿ ಮಾಡಿ ಅದನ್ನು ಆರೋಪಿಯು ಶಾಂತರವರಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಶಾಂತರವರಿಗೆ ಆರೋಪಿಯು ಹಣ ಕೊಟ್ಟ ಬಗ್ಗೆ ಅವರು ವಿಡಿಯೋ ಮಾಡಿಕೊಂಡಿದ್ದು ಅದರಲ್ಲಿ ನಾನು ಇದ್ದೇನೆ ಎಂದರೆ ಸರಿಯಲ್ಲ. ಆ ವಿಡಿಯೋವನ್ನು ನಾನೇ ಮಾಡಿದ್ದು ಎಂದರೆ ಸರಿಯಲ್ಲ. ಆ ಸಮಯಕ್ಕೆ ನಿಪಿ-1 ರ ಚೆಕ್ ಮತ್ತು ಬೈಕನ್ನು ಆರೋಪಿಗೆ ಗೊತ್ತಾಗದೇ ಹಾಗೇ ನಾನು ತೆಗೆದುಕೊಂಡು ಹೋಗಿದೆ ಎಂದರೆ ಸರಿಯಲ್ಲ.

ನನ್ನ ಮನೆಯಲ್ಲಿದ್ದ ಆರೋಪಿಯ ಬೈಕನ್ನು ಫೈನಾನ್ಸರವರು ಸೀಜ್ ಮಾಡಿ ತೆಗೆದುಕೊಂಡು ಹೋಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕನ್ನು ಆರೋಪಿಯು ಶಾಂತರವರಿಗೆ ಕೊಟ್ಟಿದ್ದನ್ನು ಪಡೆದುಕೊಂಡು ಅದಕ್ಕೆ ಬೇರೊಬ್ಬರಿಂದ ಸಹಿ ಮಾಡಿಸಿ, ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕಿನಲ್ಲಿ ನನ್ನ ಹೆಸರು ಮತ್ತು ಮೊತ್ತವನ್ನು ನಾನೇ ಬರೆದು, ನನ್ನ ಸಹಿಯನ್ನು ಮಾಡಿದ್ದೇನೆ. ದಿ.15.11.2022 ರಂದು ಸಂಜೆ 6 ರ ಸಮಯದಲ್ಲಿ ಆರೋಪಿ ನನ್ನ ಮನೆಗೆ ಬಂದಿದ್ದರು. ಆಗ ಸುಮಾರು ಒಂದು ಗಂಟೆಗಳ ಕಾಲ ಮಾತುಕತೆಯಾಗಿತ್ತು. ಅಕ್ರಮವಾಗಿ ಲಾಭಗಳಿಸುವ ಉದ್ದೇಶದಿಂದ ಶಾಂತರವರ ಬಳಿ ಇದ್ದ ನಿಪಿ1 ರ ಚೆಕ್ಕನು ಬಳಸಿ, ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನೊಂದಿಗೆ ವ್ಯವಹಾರ ಮಾಡಿದ್ದರೇ ಅವರ ನಿಜವಾದ ವಿಳಾಸವನ್ನು ನೋಟಿಸು ಮತ್ತು ದೂರಿನಲ್ಲಿ ನಮೂದಿಸಬೇಕಾಗಿತ್ತು ಎಂದರೆ ಸಾಕ್ಷಿಯು ನನ್ನ ಬಳಿ ಹಣ ಕೇಳುವಾಗ ಆರೋಪಿ ಪಿರ್ಯಾದಿನಲ್ಲಿ ಬರೆದಿರುವ ವಿಳಾಸ ಇದ್ದರು ಎಂದು ನುಡಿಯುತ್ತಾರೆ. ಈ ಸಂಬಂಧ ದಾಖಲೆ ಹಾಜರುಪಡಿಸಲಾಗುವುದಾ ಎಂದರೆ ಸಾಕ್ಷಿಯು ನಾನು ಅವರ ಮನೆಗೆ ಬರ್ತಡೇ ಹೋಗಿದ್ದು ಆ ವಿಳಾಸ ನನಗೆ ಗೊತ್ತಿತ್ತು ಎಂದು ನುಡಿಯುತ್ತಾರೆ. ಆರೋಪಿಯ ಮನೆ ಹಂಚಿನದ್ದ, ಶೀಟಿನದ್ದ ಎಂದರೆ ನನಗೆ ಗೊತ್ತಿಲ್ಲ.

ಮೂಡಿಗೆರೆ-ಬೇಲೂರು ರಸ್ತೆಯ ಎಡಕ್ಕೆ ಆರೋಪಿಯ ಮನೆ ಇದೆ. ಆರೋಪಿಯ ತಂದೆ ಪಂಚಾಯಿತಿಯ ಸದಸ್ಯರು ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿಯ ಮನೆಗೆ ಹೋಗಿದ್ದ ದಿನಾಂಕ ಗೊತ್ತಿಲ್ಲ ಆದರೆ ಅವರ ಮಗಳ ಹುಟ್ಟಿದ ಹಬ್ಬಕ್ಕೆ ಹೋಗಿದ್ದೆ. ನಾನು ಮನೆಯಲ್ಲಿದ್ದ ಹಣವನ್ನು ಆರೋಪಿಗೆ

ಕೊಟ್ಟಿದ್ದು 15 ನೇ ತಾರೀಕು ಬ್ಯಾಂಕಿನಿಂದ ಹಣ ಡ್ರಾ ಮಾಡಿಲ್ಲ. ಅಕ್ಟೋಬರ್ ತಿಂಗಳ ನನ್ನ ಮತ್ತು ನನ್ನ ಗಂಡನ ಸಂಬಳವನ್ನು ಬ್ಯಾಂಕಿನಿಂದ ತಂದು ಇಟ್ಟುಕೊಂಡಿದ್ದೇವು. ನವೆಂಬರ್ ತಿಂಗಳಲ್ಲಿ ಪೂರ್ತಿ ಸಂಬಳದ ಹಣವನ್ನು ಡ್ರಾ ಮಾಡಿರಲಿಲ್ಲ ಆದರೆ ಸ್ವಲ್ಪ ಹಣವನ್ನು ತಂದು ಇಟ್ಟುಕೊಂಡಿದ್ದೆವು. ನಾನು ಮತ್ತು ನನ್ನ ಗಂಡ ಸಂಬಂಳದಿಂದ ಬಂದು ಇಟ್ಟುಕೊಂಡಿದ್ದ ಹಣವನ್ನು ಆರೋಪಿಗೆ ಕೊಟ್ಟಿದ್ದಾಗಿ ದೂರು ಮತ್ತು ನೋಟಿಸಿನಲ್ಲಿ ಬರೆಸಿಲ್ಲ. 2022 ರ ಅಕ್ಟೋಬರ ಮತ್ತು ನವೆಂಬರ್ ತಿಂಗಳಿಗೆ ಸಂಬಂದಪಟ್ಟ ನನ್ನ ಪತಿಯ ಅಕೌಂಟ್ ಸ್ಟೇಟ್‌ಮಂಟನ್ನು ಅವಶ್ಯಕತೆ ಇದ್ದರೆ ಹಾಜರುಪಡಿಸುತ್ತೇನೆ. ಈ ಪ್ರಕರಣದ ದಾಖಲು ಮಾಡಲು ನಮ್ಮ ಇಲಾಖೆಯಿಂದ ಅನುಮತಿ ಪಡೆದಿಲ್ಲ. ಅಕ್ಟೋಬರ್ ಮತ್ತು ನವೆಂಬರ ತಿಂಗಳಲ್ಲಿ ಬಂದ ಹಣವನ್ನು ನಾನು ಆರೋಪಿಗೆ ಕೊಟ್ಟಿದ್ದೇನೆ ಎಂದರೆ ಸರಿ.

ನನಗೆ ಇರುವ ಸಾಲದ ಕಂತನ್ನು ನಾನೇ ಪಾವತಿ ಮಾಡುತ್ತೇನೆ ಆದರೆ ಅದು ಸಂಬಳದಲ್ಲಿ ಕಡತವಾಗುವುದಿಲ್ಲ. 2022-23 ರಲ್ಲಿ ಎಷ್ಟು ಸಾಲ ಮಾಡಿದ್ದೀರಾ ಎಂದರೆ ಸಾಕ್ಷಿಯು ಆ ವರ್ಷ ಯಾವುದೇ ಸಾಲ ಮಾಡಿಲ್ಲ ಆದರೆ 2019 ರಲ್ಲಿ ಮಾಡಿದ ಸಾಲವನ್ನು ಹಿಂತಿರುಗಿಸುತ್ತಾ ಬರುತ್ತಿದ್ದೇನೆ ಎಂದು ನುಡಿಯುತ್ತಾರೆ. ದೂರು, ನಿಪಿ-3 ಮತ್ತು 6 ರ ನೋಟಿಸಿನಲ್ಲಿ ಬರೆಸಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸದರಿ ನೋಟಿಸುಗಳು ಆರೋಪಿಗೆ ಜಾರಿಯಾಗದಿದ್ದರೂ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಶಾಂತರವರು ಅಕ್ರಮ ಲಾಭಗಳಿಸುವ ಉದ್ದೇಶದಿಂದ ಈ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-1(ಎ) ಸಹಿಯನ್ನು ನಾನು ಮತ್ತು ಶಾಂತರವರು ಸೇರಿ ಬರೆದಿದ್ದೇವೆ ಎಂದರೆ ಸರಿಯಲ್ಲ. ನಿಪಿ-1(ಎ) ಸಹಿ ಆರೋಪಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿರುವಷ್ಟು ಹಣ ಕೊಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನನಗೆ ಸಾಲ ಇರುವ ಕಾರಣ ಆರೋಪಿಗೆ ಸಾಲ ಕೊಡುವಷ್ಟು ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.